ಸಿ.ಬಿ.ಐ. ತನಿಖೆಗೆ ರಾಜ್ಯ ಸರ್ಕಾರದವರು ಅನುಮತಿ ನೀಡುವ ಬಗ್ಗೆ

೧೬೧. ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ದೆಹಲಿ ವಿಶೇಷ ಪೋಲೀಸ್ ಕಾಯಿದೆಯ ೬ನೇ ನಿಯಮದಂತೆ ರಾಜ್ಯದಲ್ಲಿ ಸಿ. ಬಿ. ಐ. ತನಿಖೆಗೆ ರಾಜ್ಯ ಸರಕಾರದವರು ಅನುಮತಿ ನೀಡಿದ್ದಾರೆಯೇ ?

ಆ) ಈ ಅನುಮತಿಯನ್ನು ವಾಪಸು ಪಡೆಯಲು ಸರಕಾರದವರು ಕ್ರಮವನ್ನು ಕೈಗೊಂಡಿದ್ದಾರೆಯೆ?

ಇ) ಈ ಅನುಮತಿಯಂತೆ ಸಿ. ಬಿ. ಐ. ನಡೆಸುತ್ತಿರುವ ತನಿಖೆಗಳೆಷ್ಟು? ಮತ್ತು ತನಿಖೆಗಳು ಯಾವ ಹಂತದಲ್ಲಿವೆ?

ಶ್ರೀ ರಾಮಕೃಷ್ಣ ಹೆಗಡೆ.—(ಮಾನ್ಯ ಮುಖ್ಯ ಮಂತ್ರಿಯವರು)

ಅ) ಹೌದು

ಆ) ಇಲ್ಲ.

ಇ) ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವಿಷಯವಾದ್ದರಿಂದ, ಈ ವಿವರಗಳು ರಾಜ್ಯ ಸರಕಾರದ ಹತ್ತಿರ ಲಭ್ಯವಿಲ್ಲ.

ಪೋಲೀಸ್ ಇಲಾಖೆಯಲ್ಲಿರುವ ವಿವಿಧ ಅಧಿಕಾರದಲ್ಲಿರುವವರ ಸಂಖ್ಯೆ ಬಗ್ಗೆ

೧೯೫. ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ದಯಮಾಡಿಸಿ ಉತ್ತರಿಸುವರೆ?

ಅ) ರಾಜ್ಯದ ಪೋಲೀಸ್ ಇಲಾಖೆಯಲ್ಲಿ ವಿವಿಧ ಅಧಿಕಾರದಲ್ಲಿರುವವರ ಸಂಖ್ಯೆ ಎಷ್ಟು?

ಆ) ೧೯೭೧—೭೨ರಲ್ಲಿ ಇದ್ದ ಸಂಖ್ಯೆ ಎಷ್ಟು?

ಇತ್ತು.

ಇ) ಯಾವ ಆಧಾರದ ಮೇಲೆ ಅಧಿಕಾರಿ ಸಂಖ್ಯೆಯನ್ನು ಹೆಚ್ಚು ಮಾಡಲಾಗುತ್ತದೆ?

ಶ್ರೀ ರಾಮಕೃಷ್ಣ ಹೆಗಡೆ.—(ಮಾನ್ಯ ಮುಖ್ಯ ಮಂತ್ರಿಯವರು).—

ಅ) ತಾರೀಖು ೩೧-೭-೭೩ರಂದು ಪೋಲೀಸ್ ಇಲಾಖೆಯಲ್ಲಿ ವಿವಿಧ ಅಧಿಕಾರದಲ್ಲಿ ಇರುವವರ ಸಂಖ್ಯೆ ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ವರ್ಗ	ಸಿವಿಲ್	ಸಶಸ್ತ್ರ ದಳ	ಕೆಎಸ್ ಆರ್‌ಪಿ	ಒಟ್ಟು
೧)	ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್	೧	—	—	೧
೨)	ಆರಕ್ಷಕ ಮಹಾನಿರ್ದೇಶಕರು	೧	—	—	೧
೩)	ವಿಶೇಷ ಆರಕ್ಷಕ ಮಹಾನಿರೀಕ್ಷಕರುಗಳು	೩	—	—	೩
೪)	ಅಧಿಕ ಆರಕ್ಷಕ ಮಹಾನಿರೀಕ್ಷಕರುಗಳು	೨	—	—	೨
೫)	ಉಪ ಆರಕ್ಷಕ ಮಹಾನಿರೀಕ್ಷಕರುಗಳು	೧೬	—	—	೧೬
೬)	ಆರಕ್ಷಕಾಧೀಕ್ಷಕರುಗಳು. ಸಮಾದೇಷ್ಟರು	೫೪	೨	೫	೬೧
೭)	ಉಪ ಆರಕ್ಷಕಾಧೀಕ್ಷಕರುಗಳು ಸಹಾಯಕ ಆರಕ್ಷಕಾಧೀಕ್ಷರುಗಳು. ಮತ್ತು ಸಹಾಯಕ ಸಮಾದೇಷ್ಟರುಗಳು	೧೩೯	೧೫	೧೧	೧೬೫
೮)	ಆರಕ್ಷರ ನೀರಿಕ್ಷಕರುಗಳು. ವೀಸಲು				